ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 3, July-August 2024, Pp. 1-5
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಕನಕದಾಸರ ಪದಗಳಲ್ಲಿ ವೈಚಾರಿಕ ಬಿಕ್ಕಟ್ಟು

**ಡಾ. ಬೋಜಮ್ಮ ಕೆ. ಎನ್**
ಸಹಾಯಕ ಪ್ರಾಧ್ಯಾಪಕರು, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ (ಸ್ವಾಯತ್ತ) ಕಾಲೇಜು, ಉಜಿರೆ

***Abstract:***
*ಹರಿದಾಸ ಪರಂಪರೆಯಲ್ಲಿ ಕನಕದಾಸರಿಗೆ ವಿಶಿಷ್ಟ ಸ್ಥಾನವಿದೆ. ಅವರು ಕೇವಲ ಹರಿದಾಸರು ಮಾತ್ರ ಆಗಿರದೆ. ಶ್ರೇಷ್ಠ ಮಟ್ಟದ ಚಿಂತಕರೂ, ಕವಿಗಳು ಆಗಿದ್ದರು. 16ನೇ ಶತಮಾನದಲ್ಲಿ ಹಾವೇರಿ ಜಿಲ್ಲೆಯ ಬಾಡ ಗ್ರಾಮದಲ್ಲಿ ಜನಿಸಿದರು. ಹುಟ್ಟು ಹೆಸರು ತಿಮ್ಮಪ್ಪ ಐತಿಹ್ಯದ ಪ್ರಕಾರ ಕೃಷಿಕರಾಗಿದ್ದ ಕನಕದಾಸರ ತಂದೆ-ತಾಯಿ ತೀರಿಕೊಂಡ ನಂತರದಲ್ಲಿ ಭೂಮಿ ಅಗೆಯುವಾಗ ಅಲ್ಲಿ ನಿಧಿ ದೊರೆಯುತ್ತದೆ. ಅದನ್ನು ದೇವಾಲಯದ ಜೀರ್ಣೋದ್ಧಾರ, ಲೋಕ ಕಲ್ಯಾಣಕ್ಕಾಗಿ ಉಪಯೋಗಿಸಿದರು. ಇದರಿಂದ ಬಾಡ ಗ್ರಾಮದ ಜನರು 'ಕನಕ' ಎಂದು ಕರೆದರು. ಹರಿಯಲ್ಲಿ ಭಕ್ತಿ ಹೊಂದಿದ ಅವರು 'ಹರಿದಾಸರಾದರು'.*

***Keywords:*** *ದಾಸ ಪರಂಪರೆ, ದಾಸ ಸಾಹಿತ್ಯ, ಕನಕದಾಸ, ಮೋಹನ ತರಂಗಿಣಿ, ನಳಚರಿತ್ರೆ.*

**ಪೀಠಿಕೆ**

ಕನಕದಾಸರು ತಮ್ಮ ಜೀವಿತಾವಧಿಯಲ್ಲಿ ಎರಡು ಕಾವ್ಯಗಳನ್ನು ರಚಿಸಿದ್ದಾರೆ. ಮೋಹನ ತರಂಗಿಣಿ (ಶೃಂಗಾರ ಕಾವ್ಯ), ನಳಚರಿತ್ರೆ (ನಳ ದಯಮಂತಿಯ ಪ್ರೇಮ ಕಾವ್ಯ), ಕಾಮಧಾನ್ಯ ಚರಿತೆ (ಸಾಮಾಜಿಕ ಆಶಯವನ್ನು ಒಳಗೊಂಡ ಕಾವ್ಯ) ಕನಕರ ವೈವಿದ್ಯಕ್ಕೆ ಸಾಕ್ಷಿಯಂತಿದೆ. ಅನೇಕ ಕೀರ್ತನೆಗಳನ್ನು ರಚಿಸಿದ್ದಾರೆ. ನರಸಿಂಹಸ್ತವನ ಕೃತಿ (ಲಭ್ಯವಾಗಿಲ್ಲ) ಕೀರ್ತನೆಗಳಲ್ಲದೆ ಉಗಭೋಗಗಳು, ಸುಳಾದಿಗಳು, ಕೆಲವು ಮಂಡಿಗೆಗಳನ್ನು ರೂಪದಲ್ಲಿ ಪ್ರಕಟವಾಗಿದೆ. ಆರಾಧ್ಯ ದೈವ ಕಾಗಿನೆಲೆ ಆದಿಕೇಶವ ಅಂಕಿತವನ್ನು ಕೀರ್ತನೆಯಲ್ಲಿ ಕಾಣಬಹುದು.

ಕನಕ ದಾಸರನ್ನು ಕುರಿತಂತೆ ಎಚ್. ತಿಪ್ಪೆರುದ್ರಸ್ವಾಮಿ ಅವರು "ಇಡಿ ಹರಿದಾಸ ಪರಂಪರೆಯಲ್ಲಿ ಕನಕದಾಸರ ಸ್ಥಾನ ಅನೇಕ ಕಾರಣಗಳಿಂದ ವಿಶಿಷ್ಟವಾದದ್ದು. ಅಂದು ಸಮಾಜದ ಕೆಳವರ್ಗದವರೆಂದು ಪರಿಗಣಿಸಲ್ಪಟ್ಟ ಕುರುಬರಲ್ಲಿ ಜನ್ಮವೆತ್ತ, ವಿಜಯನಗರ ಸಾಮ್ರಾಜ್ಯಕ್ಕೆ ನಿಷ್ಠೆಯುಳ್ಳ ಮಹಾಶೂರನಾದ ನಾಯಕನಾಗಿದ್ದು, ಲೌಕಿಕ ಅಧಿಕಾರವನ್ನು ಪಡೆದಿದ್ದರೂ ಅಂತರಂಗದಲ್ಲಿ ನಿರಂತರವಾಗಿ ಮೊರೆಯುತ್ತಿದ್ದ ಆಧ್ಯಾತ್ಮಿಕ ಅಭಿಪ್ಸೆಗೆ ಓಗೊಟ್ಟು ಲೌಕಿಕವನ್ನು ತ್ಯಜಿಸಿ ದಾಸಪಂಥದ ಕಡೆಗೆ ಆಕರ್ಷಿತವಾದುದು ದಾಸಪರಂಪರೆಗೆ ಒಂದು ಗೌರವವನ್ನು ತಂದು ಕೊಡುವುದಕ್ಕೆ ಕಾರಣವಾಯಿತು ಎಂದು ಹೇಳುತ್ತಾರೆ.

ಕನಕದಾಸರು ತಮ್ಮ ಸುತ್ತಲಿನ ಬದುಕನ್ನು ಸೂಕ್ಷ್ಮವಾಗಿ ನೋಡಿ ಅಲ್ಲಿನ ಜಾತಿಮತ ತಾರತಮ್ಯಗಳನ್ನು, ಧರ್ಮದ ಆಚರಣೆಯ ಹಿನ್ನಲೆಯಲ್ಲಿರುವ ಕುಟಿಲ ಕುಹಕಗಳನ್ನು ಆಧ್ಯಾತ್ಮಿಕ ಬೂಟಾಟಿಕೆಯನ್ನು ಯಾವ ಮುಲಾಜಿಲ್ಲದೆ ಖಂಡಿಸಿದರು. ಅವರ ಕೃತಿಯಲ್ಲಿ ಕಂಡು ಬರುವ

***Please cite this article as:*** ಬೋಜಮ್ಮ ಕೆ.ಎನ್. (2024). ಕನಕದಾಸರ ಪದಗಳಲ್ಲಿ ವೈಚಾರಿಕ ಬಿಕ್ಕಟ್ಟು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 3(3), 1–5

ತೀವ್ರ ಸಮಾಜ ವಿಮರ್ಶೆ ವಿಡಂಬನೆ ಅವರ ವೈಚಾರಿಕ ಮನೋಧರ್ಮವನ್ನು ಎತ್ತಿಹಿಡಿಯುತ್ತದೆ.

ಜನರ ಬದುಕು ಹಸನಾಗಬೇಕೆಂಬ ದೃಷ್ಟಿಯಿಂದ ಅವರು ತಮ್ಮ ಕೀರ್ತನೆಗಳ ಮೂಲಕ ಸಾರ್ವಕಾಲಿಕ ಮೌಲ್ಯವನ್ನು ಸಾರಿ ಹೇಳಿದರು. ಅವರು ಜನ ಸಾಮಾನ್ಯರ ಆತ್ಮೋನ್ನತಿ ಹಾಗೂ ಸಮಾಜದ ಉನ್ನತಿಗೆ ಸಾಕಷ್ಟು ಚಿಂತನ ಮಂಥನ ನಡೆಸಿದರು. "ಸಮಾಜದ ಕೆಳವರ್ಗದ ಜನರೊಂದಿಗೆ ನೇರ ಸಂಪರ್ಕವಿದ್ದರಿಂದ ಕನಕದಾಸರ ಸಾಮಾಜಿಕ ಅನುಭವದ ಪರಿಧಿ ಉಳಿದ ಹರಿದಾಸರುಗಳ ಅನುಭವ ಪರಿಧಿಗಿಂತಿ ವಿಸ್ತೃತವಾದದ್ದು. ಸಮಾಜದ ಕೆಳವರ್ಗದವರ ಆಚಾರ ವಿಚಾರಗಳನ್ನು ನಡವಳಿಕೆಗಳನ್ನು ತಿದ್ದುವಲ್ಲಿ, ದೇವದಾಸಿ ಪದ್ದತಿ, ಪ್ರಾಣಿವಧೆ, ಮಧ್ಯಪಾನಾದಿಗಳ ಬಗೆಗೆ ಅರಿವು ಮೂಡಿಸುವಲ್ಲಿ ಅವರು ತೋರಿದ ಕಳಕಳಿ ಕನಕದಾಸರನ್ನು ಖಂಡಿತವಾದಿಗಳನ್ನಾಗಿ ಮಾಡಿದೆ. ಜಾತಿ ಕುಲಗಳ ಮಾತು ಬಂದಾಗ ಅಂತೂ ಕನಕದಾಸರು ಸ್ವತಃ ರುದ್ರರಾಗಿ ಬಿಟ್ಟಿದ್ದಾರೆ". (ನಾಗರತ್ನ, ಟಿ.ಎನ್. (1999). *ಕನಕ ಸಾಹಿತ್ಯ ದರ್ಶನ.* ಪುಟ. 157).

ಕನಕದಾಸರು ಬರೇ ಭಕ್ತಿಯ ಕವಿ ಅಷ್ಟೇ ಅಲ್ಲ; ಅವರೊಬ್ಬ ಮಹಾನ್ ಮಾನವತಾದಿಯೂ ಹೌದು ಎಂಬುದಕ್ಕೆ ಅವರ ರಚನೆಗಳೇ ಸಾಕ್ಷಿ. ಮನುಷ್ಯನ ಮನಸ್ಸಿನಲ್ಲಿ ಭಕ್ತಿಯೆಂಬುದು ಅಂತರಾಳದಲ್ಲಿರಬೇಕು. ಅದು ಯಾಂತ್ರಿಕವಾಗಿರಬಾರದು. ಎಲ್ಲರೂ ದೇವರಿಗೆ ಭಕ್ತಿ ಸಲ್ಲಿಸುತ್ತಾರೆಂದು ನಾವು ಕಾಟಾಚಾರಕ್ಕೆ ಭಕ್ತಿ ಸಲ್ಲಿಸಬಾರದು. ಅಂತಃಕರಣದಿಂದ ಸಲ್ಲಿಸಬೇಕು. ಆಗ ಮಾತ್ರ ಆ ಭಕ್ತಿ ಶ್ರೇಷ್ಠವಾಗುತ್ತದೆ. ಭಕ್ತಿಯ ಮಹಿಮೆಯನ್ನು ಅರ್ಪಿಸಲು ಹೋದರೆ ಅದು ಯಾವ ರೀತಿ ಇರುತ್ತದೆ ಎಂಬುದನ್ನು ಹೀಗೆ ಹೇಳುತ್ತಾರೆ.

> ***"ಗಂಡು ಮುಳುಗನ ಹಕ್ಕಿನಂತೆ ಕಂಡ ಕಂಡ ನೀರವ ಮುಳುಗಿ***
> ***ಮಂಡೆಶೊಲೆ ಬಾಹೋದಲ್ಲದೆ ಗತಿಯ ಕಾಣೆನೆ***
> ***ಮಂಡೂಕನಂದದಲಿ ನೀರು ತಡಿಯಲಿ ಕುಳಿತುಕೊಂಡು***
> ***ಮಂಡೆ ಮುಸಕನಿಕ್ಕೆ ಮೂಗು ಹಿಡಿದು ಬಿಡುವ ಭ್ರಮಿತನಯ್ಯ ॥***

ತೋರಿಕೆಗೆ ದೇವರ ಪರಮ ಭಕ್ತನೆಂದು ಮನಸ್ಸಿನಲ್ಲಿ ಅನೇಕ ಕಪಟ ಬುದ್ಧಿಗಳನಿಟ್ಟುಕೊಂಡು ದೇವರ ದರ್ಶನಕ್ಕೆ ಹೋಗುವ ನೀರೊಳು ಮುಳುಗಿ ಮಡಿವಂತನಾದೆನೆಂದು ತಿಳಿದು ದೇವರಿಗೆ ಹೋಗುವ ಭಕ್ತರಿಗೆ ತಲೆಗೆ ಶಾಲೆ ಬರುತ್ತದೆಯೇ ಹೊರತು ಮುಕ್ತಿದೊರೆಯುವುದಿಲ್ಲ. ಇವರು ಗುಂಡಿಯ ದಡದಲ್ಲಿರುವ ಕಪ್ಪೆಯಂತೆ. ಏಕೆಂದರೆ ದಂಡೆಯಲ್ಲಿ ಕುಳಿತ ಕಪ್ಪೆಯ ಬಳಿ ಯಾರಾದರು ಹೋದರೆ ಆ ಕಪ್ಪೆ ತಟ್ಟನೆ ಕೆಳಗೆ ನೆಗೆಯುತ್ತದೆ. ಯಾರು ಇಲ್ಲದನ್ನು ನೋಡಿ ಮತ್ತೆ ದಡಕ್ಕೆ ಬರುತ್ತದೆ. ಹಾಗೆಯೇ ಇವರು ಜನರು ಕಂಡ ಕೂಡಲೇ ನೀರೊಳಗೆ ಮುಳುಗಿ ಡಂಭಾಚಾರದ ಭಕ್ತಿಯನ್ನು ಪ್ರತಿ ಬಿಂಬಿಸುತ್ತಾರೆ ಎಂದು ಹೇಳುತ್ತಾರೆ.

ಕೆಲವರು ಭಕ್ತಿಯ ನೆಪದಲ್ಲಿ ತಮ್ಮ ಸ್ವಾರ್ಥ ಭೋಗಕ್ಕಾಗಿ ದೇವರ ಗುಡಿ ಮುಂದೆ ಕುಳಿತುಕೊಳ್ಳುತ್ತಾರೆ. ಅದನ್ನೇ ಕನಕದಾಸರು, 'ತೀರ್ಥ ಪೀಡಿದವರೆಲ್ಲ ತಿರುನಾಮಾಧಾರಿಗಳೆ' ಜನಮ್ಮ ಸಾರ್ಥಕವಿಲ್ಲದವರೆಲ್ಲ ಭಾಗವತರೆ ಎಂಬ ಕೀರ್ತನೆಯಲ್ಲಿ ಮೂಗ್ಹಿಡಿದು ನೀರೊಳಗೆ ಮುಳುಗಿ ಜಪತಪಾದಿ ಮಾಡಿನಿಗ ಮಾಗಮ ಪುರಾಣಗಳನೋದಿ ತಿಳಿದು ಬಾಗಿ ಪರಸ್ತ್ರೀಯರನು ಬಯಸಿ ಕಣ್ಣೆಡುವಂಥ ಯೋಗ ಭ್ರಷ್ಟರೆಲ್ಲ ದೇವ ಬ್ರಾಹ್ಮಣರೇ? ॥ ಎಂದು ಪ್ರಶ್ನಿಸುತ್ತಾ ಕೇವಲ ತಮ್ಮ ಹೊಟ್ಟೆ ಹೊರೆಯುವುದಕ್ಕಾಗಿ ಇದನ್ನು ಅವಲಂಬಿಸಿ ಹೊಟ್ಟೆಯನ್ನು ತುಂಬಿಕೊಂಡ ಮೇಲೆ ಅಂಗಾಂಗಭಕ್ಕಾಗಿ ಗುಡಿಗೆ ಬಂದ ಸ್ತ್ರೀಯರ ಮೇಲೆ ಕಣ್ಣಿಡುವಂಥ ಪೂಜಾರಿಗಳನ್ನು ಟೀಕಿಸಿದ್ದಾರೆ. ಆಚಾರ ವಿಚಾರಗಳಲ್ಲಿ ನಿರಂತರ ಡಂಭಾಚಾರದ ಕಪಟಿಗಳನ್ನು ಟೀಕಿಸಿದ್ದಾರೆ.

ಹಿಂದೂ ಸಂಪ್ರದಾಯದ ಕೆಲವೊಂದು ಅನಿಷ್ಟ ಪದ್ದತಿ ಆಚರಣೆಗಳನ್ನು ಖಂಡಿಸಿ ಸಮಾಜವನ್ನು ತಿದ್ದಲು ಕನಕದಾಸರು ಪ್ರಯತ್ನಿಸುತ್ತಾರೆ. ಅವರ

ಕಾಲದಲ್ಲಿ ರೂಢಿಯಲ್ಲಿದ್ದ ಕ್ಷುದ್ರದೇವತೆಗಳ ಆಚರಣೆಗಳನ್ನು ದಾಖಲಿಸುತ್ತಾ. ಇವುಗಳನ್ನು ಆಚರಿಸುವುದರಿಂದ ನಮಗೆ ನರಕ ತಪ್ಪದ್ದು ಎಂಬ ಎಚ್ಚರಿಕೆಯ ಮಾತು ಹೇಳುತ್ತಾ.

*"ಎಕ್ಕನಾಡಿಯಲ್ಲಮ್ಮ ಮಾರಿ ದುರ್ಗಿ ಚೌಡಿಯ*
*ಅಕ್ಕರಿಂದಲಿ ಪೂಜೆ ಮಾಡಬೇಕೆ*
*ಗಕ್ಕನೆಯ ಯವನ ದೂತೆಳೆದೊಯ್ಯುವಾಗ*
*ಶಕ್ತೇರು ಬಿಡಿಸಿಕೊಂಡಾರೇನು ಮರುಳೆ* ॥ 1 ॥

*ಸಂಭ್ರಮದಲ್ಲಿ ಒಂದ್ಹೊತು ನೇಮದೊಳಗಿದ್ದ*
*ತಂಬಿಟ್ಟಿನ ದೀಪ ಹೊರಲೇತಕೆ*
*ಕೊಂಬು ಹೋತ ಕುರಿ ಕೋಣಗಳನ್ನು ಬಲಿಗೊಂಬ*
*ದೊಂಬಿ ದೈವಗಳ ಭಜಿಸದಿರು ಮನವೇ* ॥ 2 ॥

ಇಂತಹ ಸಾಮಚಾರಣೆಯ ಅಮಾನವೀಯ ಪದ್ದತಿಗಳ ವಿರುದ್ಧ ಸಿಡಿದೆದ್ದು ಜನ ಸಾಮಾನ್ಯರ ಅಜ್ಞಾನ ಮೌಢ್ಯಗಳಲ್ಲಿ ಸಿಕ್ಕಿಕೊಂಡ ತೊಳಲಾಡುವುದನ್ನು ನೋಡಿ ಅದರಿಂದ ಅವರು ಹೊರಗೆ ಬರಲು ತಿಳಿ ಹೇಳಿದ್ದಾರೆ. ತಮ್ಮ ಕಾಲ ಘಟ್ಟದಲ್ಲಿಯೇ ಬೆತ್ತಲೆ ಸೇವೆಯ ವಿರುದ್ಧ ಧ್ವನಿ ಎತ್ತಿರುವುದನ್ನು ನೋಡಿದರೆ ಕನಕದಾಸರ ವೈಚಾರಿಕ ನಿಲುವು ಕಷ್ಟವಾಗುತ್ತದೆ.

ಭಾರತ ದೇಶದಲ್ಲಿ ಬೃಹದಾಕಾರವಾಗಿ ಕಾಡುತ್ತಿರುವ ಸಮಸ್ಯೆ ಕುಲಕ್ಕೆ ಸಂಬಂಧಿಸಿದ್ದು, ಮನುಷ್ಯ ಜಾತಿ ತಾನೊಂದೆ ವಲಂ' ಎಂದು ಹೇಳಿದ ಪಂಪನ ಕಾಲದಿಂದ ಇಂದಿನವರೆಗೂ ಜಾತಿಯ ಹೊಡೆತಕ್ಕೆ ಸಿಲುಕಿದವರು ಅನೇಕರು 'ಪಂಪನ ವಿಕ್ರಮಾರ್ಜುನ ವಿಜಯಂ'ದಲ್ಲಿ ಕರ್ಣ 'ಕುಲಂ ಕುಲ ಮತ್ತು ಚಲಂ ಕುಲಂ ಗುಣಂಕುಲಂ' ಎಂದು ಹೇಳಿದುನಾದರೂ ಅದು ಅವನನ್ನು ಗಾಸಿ ಮಾಡಿತು. ಈ ಕುಲದ ಸಮಸ್ಯೆಯೇ ಇದರಿಂದ ಕನಕದಾಸರೂ ಹೊರತಲ್ಲ. ಇಂತಹ ಸಮಸ್ಯೆ ಕನಕದಾಸರಿಗೂ ಎದುರಾಯಿತು ಜಾತಿ ಕುಲದ ಪ್ರಶ್ನೆ ಬಂದಾಗ ಅವರು ತೀಕ್ಷ್ಣವಾಗಿ ಪ್ರತಿಕ್ರಯಿಸಿ ಖಂಡಿಸುತ್ತಾರೆ. ಪ್ರಗತಿಪರ ಚಿಂತಿಕರಾಗಿ, ಸುಧಾರಣಾವಾದಿ ನಿಲುವು ಅವರ ಸಾಹಿತ್ಯದಲ್ಲಿ ಕಾಣಬಹುದು. "ನಾವು ಕುರುಬರು ನಮ್ಮ ದೇವರು ಬೀರಯ್ಯ ಕಾವೆ ನಮ್ಮಜ್ಜ ನರಕುರಿಯ ಹಿಂಡುಗಳು" ॥ ಎಂಬಂಥ ರೂಪಕದಲ್ಲಿ ಹೇಳಬಲ್ಲವರಾಗಿದ್ದಾರೆ. ಭಕ್ತ ಭಗವಂತನ ಸಂಬಂಧವನ್ನು ಕುರಿ ಕುರುಬ ರೂಪದಲ್ಲಿ ಹೇಳುವುದು ಕನಕದಾಸರಿಗೆ ಮಾತ್ರ ಸಾಧ್ಯ. ಇದರಿಂದ ಅವರು ವೈಚಾರಿಕ ಹಾಗೂ ಸಾಮಾಜಿಕವಾಗಿ ಎದುರಿಸಬೇಕಾಗಿ ಬಂದ ಬಿಕ್ಕಟ್ಟುಗಳು ಹಾಗೂ ಸಂಘರ್ಷಗಳು ಕಡಿಮೆ ಇಲ್ಲ. ಇವು ಅವರ ಕೀರ್ತನೆಗಳಲ್ಲಿ ಮತ್ತು ಅವರನ್ನು ಕುರಿತ ಐತಿಕ್ಯಗಳನ್ನು ಕಾಣಿಸಿಕೊಂಡಿದೆ. ಒಂದೆಡೆ ಕನಕದಾಸರ ಮೇಲೆ ದಯಮಾಡಲು ವ್ಯಾಸ ಮುನಿ ಮಠಿಕರೆಲ್ಲ ಮಾರುತಿ ಹರೋ ॥ ಎಂಬ ಪುರಂದರ ದಾಸರ ಕೀರ್ತನೆಯಲ್ಲಿ ಗುರು ವ್ಯಾಸರಾಯರು ಶೂದ್ರನಾದ ಕನಕದಾಸರ ಮೇಲೆ ವಿಶೇಷ ಪ್ರೀತಿ ತೋರಿಸಿದ ಕಾರಣದಿಂದ ಅಂದಿನ ಸಂಪ್ರದಾಯಸ್ಥ ಬ್ರಾಹ್ಮಣರು ತೋರಿದ ಪ್ರತಿಕ್ರಿಯೆಯ ಚಿತ್ರವೊಂದು ಬಿಚ್ಚಿಕೊಳ್ಳುತ್ತದೆ. ಅಂಥ ಸಂದರ್ಭದಲ್ಲಿ

*ಕುಲ-ಕುಲವೆಂದು ಹೊಡೆದಾಡದಿರಿ ನಿಮ್ಮ*
*ಕುಲದ ನೆಲೆಯ ನೇನಾದರು ಬಲ್ಲಿರಾ?*
*ಆತ್ಮ ಯಾವ ಕುಲ ಜೀವ ಯಾವ ಕುಲ*
*ತತ್ವೇಂದ್ರಿಯಗಳ ಕುಲ ಪೇಳಿರಯ್ಯ ॥*
*ಆತ್ಮಾಂತರಾತ್ಮ ನೆಲೆಯಾದಿ ಕೇಶವ*
*ಆತನೊಂದ ಮೇಲೆ ಯಾತರ ಕುಲವಯ್ಯ?*

ಎಂದು ಪ್ರಶ್ನೆ ಮಾಡುವುದರ ಮೂಲಕ ತಮ್ಮ ಪ್ರತಿಭಟನೆಯನ್ನು ಅವರು ದಾಖಲೆ ಮಾಡುತ್ತಾ ತಮ್ಮ ವ್ಯಕ್ತಿತ್ವವನ್ನು ಪರಿಚಯ ಮಾಡುತ್ತಾರೆ. ವೈದಿಕ ಧರ್ಮದ ವಿಮಾಂಸೆಯನನು ಕಟುವಾಗಿ ಖಂಡಿಸಿದ ಕನಕದಾಸರು ಜಾತೀಯತೆಯ ವಿರುದ್ಧ ಗಟ್ಟಿಯಾಗಿಯೇ ದನಿಯೆತ್ತುತ್ತಾರೆ ಇಲ್ಲಿ ಕನಕದಾಸರು ಬಸವ ಪಂಥದಲ್ಲಿ ಸಾಗಿದುದು ಸ್ಪಷ್ಟವಾಗಿ ಗೋಚರಿಸುತ್ತದೆ.

***ವ್ಯಾಸ ಜೋಯಿಸರ ಮಗ ಮಾರ್ಕಾಂಡೇಯ ಮಾತಂಗಿಯ ಮಗ***

***ಮಂಡೋದರಿ ಕಪ್ಪೆಯ ಮಗಳು ಕುಲವನರಸದಿರೆಂಬೆ***

***ಕುಲದಿಂದ ಮುನ್ನೇನಾದಿರಬೋ***

***ಸಾಕ್ಷಾತ್ ಅಗಸ್ತ್ಯ ಕಬಿಲ, ದುರ್ವಾಸ ಮೆಟ್ಟಿಗೆ ಕಶ್ಯಪ ಕಮ್ಮಾರ ।***

***ಕೌಂಡಿನ್ಯನೆಂಬ ಋಷಿ ಮೂರು ಭವನರಿಯೆನಾವಿರ ಕಾಣಬೋ***

*ಎಂದು ಬಸವ ತತ್ವವನ್ನು ತಾವು ಪ್ರತಿಪಾದಿಸುತ್ತಾರೆ.*

ಕನಕದಾಸರು ಮುಖ್ಯವಾಗಿ ಬಡವರ ಬಂಧು. ಸಂಪತ್ತು ಕೇಂದ್ರೀಕರಣವಿರುವುದನ್ನು ವಿರೋಧಿಸುವರು ಎಲ್ಲರಿಗೂ ಸಮಭಾವವನ್ನು ಕಲ್ಪಿಸಿದವರು ಸಂಪತ್ತನ್ನು ಕೇಂದ್ರೀಕರಿಸಿಕೊಂಡು ಸೊಕ್ಕಿನಿಂದ ಮೆರೆದಾಡುವವರನ್ನು ಕಂಡು ತೆಗಳಿದವರು "ಏನು ಇಲ್ಲದ ಎರಡು ದಿನದ ಸಂಸಾರ ಜ್ಞಾನದಲ್ಲಿ ದಾನಧರ್ಮವ ಮಾಡಿರಯ್ಯ" ಹಸಿದು ಬಂದವರಿಗೆ ಆಶ್ರಯ ನೀಡಿ ಖಂಡಿಸಿರಯ್ಯ ಹುಸಿ ಮಾತಾಡದೆ ಕೊಟ್ಟ ಭಾಷೆಯನ್ನು ತಪ್ಪದೆ ನಡೆಯಬೇಕು ಕಳ್ಳತನವನ್ನು ಮಾಡಿ ಜೀವನ ನಡೆಸುತ್ತಾ ಈ ದೇಹವನ್ನು ಸುಖವಾಗಿ ಇಡಬೇಡ ದುಡಿದು ದಣಿದು ಬೆವರು ಸುರಿಸಿ ಜೀವನ ನಡೆಸುತ್ತಾ ಕುಳಿತಿರುವ ಸಭೆಯೊಳಗೆ ಕೆಟ್ಟ ಬುದ್ಧಿ ಮಾಡಬೇಡ ಸತ್ಯ ಸತ್ಯವೆಂದೇ ಹೇಳು. ಅಸತ್ಯವನ್ನು ಮುಚ್ಚಿ ಹಾಕಲು ಹೋಗಬೇಡ ಸಿರಿತನ ಬಂದಾಗ ಕೆಟ್ಟದನ್ನು ನುಡಿಯಬೇಡ. ನಾವು ನಮ್ಮವರೆಂಬ ಆತ್ಮೀಯ ನುಡಿಗಳನ್ನಾಡ ಇಷ್ಟೆಲ್ಲಾ ಮೌಲಿಕ ಮಾತುಗಳನ್ನು ಹೇಳಿ ಕೊನೆಗೆ ಒಂದು ಮಾತು ಹೇಳುತ್ತಾರೆ. ನೀನು ಎಷ್ಟೇ ಒಳ್ಳೆಯವನಾದರೂ "ಒಳ್ಳೆಯವನಾನೆಂದು ಬಲು ಹೆಮ್ಮೆಯ ಪಡಬೇಡ" ಮನುಷ್ಯನಿಗೆ ಅಹಂಕಾರ ಇರಬಾದೆಂಬ ನಿಲುವನ್ನು ಕಾಣಬಹುದು.

"ಎಲ್ಲರು ಮಾಡುವುದು ಹೊಟ್ಟೆಗಾಗಿ ಗೇಣಿ ಬಟ್ಟೆಗಾಗಿ" ಎಂಬ ಕೀರ್ತನೆಯು ಈ ಜಗತ್ತಿನಲ್ಲಿ ಯಾರು ಏನೇ ಕಾರ್ಯ ಮಾಡಿದರು ಅವರು ತಮ್ಮ ಹೊಟ್ಟೆ ಬಟ್ಟೆ ನಿವಾರಣೆಗಾಗಿಯೇ ಮಾಡುತ್ತಾರೆಂಬ ಸ್ಪಷ್ಟ ಪಡಿಸಿದ್ದಾರೆ. ದೊಡ್ಡ ದೊಡ್ಡ ಪಂಡಿತರೆಂದು ಹೇಳಿಕೊಂಡು ವೇದಶಾಸ್ತ್ರವನ್ನು ಓದಿ ಸನ್ಯರಿಗೆ ಬೋಧನೆ ಮಾಡುವುದು ತಮ್ಮ ಹೊಟ್ಟೆ ಬಟ್ಟೆಯ ಸಲುವಾಗಿ ಹೀಗಾಗಿ ಇದಕ್ಕಿಂತ ಇನ್ನೊಂದು ಮುಖ್ಯವಾದ ಹಸಿವಿದೆ. ಆತ್ಮದ ಹಸಿವು. ಇದಕ್ಕೆ ಆಧ್ಯಾತ್ಮದ ಊಟವನ್ನು ಉಣಬಡಿಸಿರಿ ಎನ್ನುತ್ತಾ. ***"ಆಹುದಾರರಹುವೆನ್ನ ಅಲ್ಲವಾದರಲ್ಲ ಬೆನ್ನಿ ಬಹುಜನರು ನೆರೆ ತಿಳಿದು ಹೇಳಿ ಮತ್ತಿದನು"*** ಎಂಬ ಕೀರ್ತನೆಯಲ್ಲಿ ಮೌಲಿಕವಲ್ಲದ್ದು ಯಾವುದು ಮತ್ತು ನಮ್ಮ ಸಂಸ್ಕೃತಿ ಪ್ರತಿಬಿಂಬ ಯಾವುದು ಎಂಬ ಲೋಕ ನೀತಿಯನ್ನು ಹೇಳಿರುವರು.

ಗುಡಿಯಲ್ಲಿ ದೇವರಿಲ್ಲ ಎಂದ ಮೇಲೆ ಆ ಗುಡಿಗೆ ಮಹತ್ವ ಬರುವುದಿಲ್ಲ. ಭಕ್ತರು ಈ ಗುಡಿಗೆ ಹೋಗದೇ ಇರುವುದರಿಂದ ಹಾಳು ಬೀಳುತ್ತದೆ. ಕನಕದಾಸರು ನಮ್ಮ ದೇಹವನ್ನು ಗುಡಿಗೆ ಹೋಲಿಸಿ ಈ ಗುಡಿಯಲ್ಲಿ ಆತ್ಮವೆಂಬ ದೇವರು ಇರದಿದ್ದರೆ. ಈ ದೇಹಕ್ಕೆ ಮಹತ್ವ ಬರುವುದಿಲ್ಲ. ಆಗ ಈ ದೇಹ ಮಣ್ಣಲ್ಲಿ ಸೇರಿಕೊಳ್ಳುತ್ತದೆ. ನಮ್ಮ ಮನಸ್ಸಿನಲ್ಲಿ ಭಕ್ತಿಯ ಭಾವ ಇಲ್ಲದಿದ್ದರೆ. ನಮ್ಮ ಪ್ರಾರ್ಥನೆ ಸಾಕಾರವಾಗುವುದಿಲ್ಲ ಕಾಟಾಚಾರಕ್ಕೆ ಸಲ್ಲಿಸಿದಂತಾಗುತ್ತದೆ ಎಂದು ಹೇಳಿದ್ದಾರೆ.

ರಾಮಧಾನ್ಯ ಚರಿತ್ರೆಯಲ್ಲಿ ಶ್ರಮಿಕರ ಪರವಾದರಾಗಿಗೆ ಉನ್ನತ ಸ್ಥಾನವನ್ನು ನೀಡಿ, ಸತ್ತುವು ಸರ್ವಕಾಲಕ್ಕೂ ಮಾನ್ಯತೆ ಪಡೆಯುತ್ತದೆ ಎಂಬುದನ್ನು ತಿಳಿಸಿದ್ದಾರೆ. ಕಪಟವಿಲ್ಲದೆ ಕಷ್ಟಪಟ್ಟು ಬದುಕುವ ಕಷ್ಟಕಾಲದಲ್ಲಿ ಸಹಾಯವಾಗುವ ರಾಗಿಗೆ ಶ್ರಮಿಕ ಪರವಾದ ಶ್ರೇಷ್ಠತ್ವವನ್ನು ಕಲ್ಪಿಸಿ ಅದಕ್ಕೆ ಒಂದು ಮೌಲಿಕತೆಯನ್ನು ತಂದು ಕೊಟ್ಟಿದ್ದಾರೆ. ಅಂದರೆ ಸಮಾಜದಲ್ಲಿ ಯಾರು ದುರ್ಬಲರೆಂದು ತಿಳಿಯಲ್ಪಟ್ಟಿರುತ್ತಾರೋ ಅವರನ್ನು ಎಬ್ಬಿಸಿ ಅವರು ಮಾಡುವ ಸಾಧನೆ ಕಾರ್ಯವನ್ನು ಹೊಗಳಿ ಸಮಾಜದಿಂದ ಅವರಿಗೆ ಮೌಲ್ಯ ಕೊಡಿಸುವುದು ಕನಕದಾಸರ ದೃಷ್ಟಿ.

ಒಟ್ಟಾರೆಯಾಗಿ ಕನಕದಾಸರು ತಮ್ಮ ಕೀರ್ತನೆಯಲ್ಲ ಸಮಾಜದಲ್ಲಿ ಆಳವಾಗಿ ಬೇರು ಬಿಟ್ಟಿದ್ದ ಮೂಡನಂಬಿಕೆ, ಕಂದಾಚಾರ, ಅಸಮಾನತೆ, ಅನಾಚಾರ ಮುಂತಾದವುಗಳನ್ನು ಹೋಗಲಾಡಿಸಲು ದಾಸರು ಸಾಕಷ್ಟು ಪ್ರಯತ್ನ ಮಾಡಿದ್ದಾರೆ. ಕುಲದ ಅಹಂಕಾರದಲ್ಲಿರುವ ಕುಲದ ಅಮಲಿನಲ್ಲಿರುವ ಕುಲವೇ ಶ್ರೇಷ್ಠವೆಂದು ಬೀಗುತ್ತಿದ್ದವರಿಗೆ ಕಟುವಾಗಿ ಖಂಡಿಸಿದ್ದಾರೆ. ತಮ್ಮ ಕವಿ ವಿಶಿಷ್ಟವಾದ ಸಹಜ ಪ್ರತಿಭೆಯಿಂದ ಮನಸ್ಸಿನ ಉದಾರತೆಯಿಂದ ವಸ್ತು ವೈವಿಧ್ಯತೆ ಹಾಗೂ ಛಂಧೋ ವೈವಿದ್ಯತೆಗಳಿಂದ, ಸಮಕಾಲೀನ ಪ್ರಜ್ಞೆಯಿಂದ, ಪಂಥಬದ್ಧವಲ್ಲದ ಉದಾತ್ತ ವ್ಯಕ್ತಿತ್ವದಿಂದ ಹಾಸ ಪರಂಪರೆಯಲ್ಲಿ ಮಾತ್ರವಲ್ಲದೆ ಕನ್ನಡ ಕವಿಗಳ ಪಂಕ್ತಿಯಲ್ಲಿಯ ವಿಶಿಷ್ಟ ಸ್ಥಾನ ಸಂಪಾದಿಸಿದ್ದಾರೆ ಎನ್ನಬಹುದು.

**ಪರಾಮರ್ಶನ ಗ್ರಂಥಗಳು**


- ಬೆಟಗೇರಿ ಕೃಷ್ಣಶರ್ಮ. (ಸಂ.) (1927). *ಶ್ರೀ ಕನಕದಾಸರ ಹಾಡುಗಳು.* ಐಬಿಹೆಚ್ ಪ್ರಕಾಶನ.
- ಹೊನ್ನು ಸಿದ್ದಾರ್ಥ ಸಿ.ಬಿ. (ಪ್ರ.ಸಂ.) *ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ (ಭಾಗ 2) (ಸಂಪುಟ 4).*
- ಪ್ರತಾಪ ಚಂದ್ರ ಶೆಟ್ಟಿ ಹಳ್ನಾಡು. (2013). *ಸಂತ ಕನಕದಾಸರು.* ಸಿರಿಗನ್ನಡ ಪುಸ್ತಕ ಮನೆ.
- ಶಿವರಾಮ ಶೆಟ್ಟಿ ಬಿ. (ಸಂ.). (2013). *ಕನಕ ಸುತ್ತ ಮುತ್ತ : ಸಂಕಥನ ಜಿಜ್ಞಾಸೆ.* ಕನಕದಾಸ ಅಧ್ಯಯನ ಕೇಂದ್ರ, ಮಂಗಳೂರು ವಿ.ವಿ.
- ಶಿವರಾಮ ಶೆಟ್ಟಿ ಬಿ. (ಸಂ.). (2010). *ಕನಕ ಚಿಂತನ.* ಕನಕದಾಸ ಅಧ್ಯಯನ ಕೇಂದ್ರ, ಮಂಗಳೂರು ವಿ.ವಿ.
- ವಿಳಿರೂರು. ಬಿ. (2010). *ಕನಕದಾಸರು ಮತ್ತು ಆಧುನಿಕ ಚಿಂತನೆಗಳು: ಮುಖಾಮುಖಿ.* ಪ್ರಸಾರಂಗ, ಕರ್ನಾಟಕ ವಿಶ್ವವಿದ್ಯಾನಿಲಯ.
- ಉಪಧ್ಯಾಯ ಜಿ.ಎನ್. *ಅನುಭವ ಸಾಹಿತ್ಯದ ವಿಭಿನ್ನ ನೆಲೆಗಳು.* ಕನ್ನಡ ವಿಭಾಗ ಮುಂಬೈ ವಿ.ವಿ.